# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ. | : | 1131 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಎಂ.ನಾಗರಾಜು<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 18–12–2024 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಲೋಕೋಪಯೋಗಿ ಇಲಾಖೆಯಲ್ಲಿ ಎಷ್ಟು ಪ್ರಧಾನ ಕಾರ್ಯದರ್ಶಿಗಳು, ಕಾರ್ಯದರ್ಶಿಗಳು, ಉಪ ಕಾರ್ಯದರ್ಶಿಗಳು ಅಧೀನ ಕಾರ್ಯದರ್ಶಿಗಳು ಮತ್ತು ಇಂಜಿನಿಯರ್‌ಗಳು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ;</td><td>ಲೋಕೋಪಯೋಗಿ ಇಲಾಖೆಯಲ್ಲಿ ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು ಮತ್ತು ಇಂಜಿನಿಯರ್‌ಗಳ ವಿವರ ಈ ಕೆಳಕಂಡಂತಿರುತ್ತದೆ.
<table>
<tr><th>ಹುದ್ದೆ</th><th>ಸಂಖ್ಯೆ (ನಿಯೋಜನಾ ಹುದ್ದೆಗಳು ಸೇರಿದಂತೆ)</th></tr>
<tr><td>ಸರ್ಕಾರದ ಪ್ರಧಾನ ಕಾರ್ಯದರ್ಶಿ</td><td>1</td></tr>
<tr><td>ಸರ್ಕಾರದ ಕಾರ್ಯದರ್ಶಿ</td><td>1</td></tr>
<tr><td>ಸರ್ಕಾರದ ಅಪರ ಕಾರ್ಯದರ್ಶಿ</td><td>1</td></tr>
<tr><td>ಸರ್ಕಾರದ ಉಪ ಕಾರ್ಯದರ್ಶಿ</td><td>3</td></tr>
<tr><td>ಸರ್ಕಾರದ ಅಧೀನ ಕಾರ್ಯದರ್ಶಿ</td><td>6</td></tr>
<tr><td>ಪ್ರಧಾನ ಇಂಜಿನಿಯರ್/ಮುಖ್ಯ ಇಂಜಿನಿಯರ್</td><td>16</td></tr>
<tr><td>ಅಧೀಕ್ಷಕ ಇಂಜಿನಿಯರ್</td><td>46</td></tr>
<tr><td>ಕಾರ್ಯಪಾಲಕ ಇಂಜಿನಿಯರ್</td><td>248</td></tr>
<tr><td>ಸಹಾಯಕ ಕಾರ್ಯಪಾಲಕ ಇಂಜಿನಿಯರ್</td><td>1012</td></tr>
<tr><td>ಸಹಾಯಕ ಇಂಜಿನಿಯರ್</td><td>1147</td></tr>
<tr><td>ಕಿರಿಯ ಇಂಜಿನಿಯರ್</td><td>1163</td></tr>
</table></td></tr>
<tr><td>ಆ)</td><td>ಈ ಇಲಾಖೆಯಲ್ಲಿ ಎಲ್ಲಾ ವರ್ಗದ ಅಧಿಕಾರಿಗಳು ಕರ್ತವ್ಯ ನಿರ್ವಹಿಸುವ ಸಂದರ್ಭದಲ್ಲಿ ಪ್ರತ್ಯೇಕವಾಗಿ "ಕರ್ನಾಟಕ ರಸ್ತೆ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ" ವನ್ನು ರಚಿಸುವ ಅಗತ್ಯವಿತ್ತೇ; ಈ ಪ್ರಾಧಿಕಾರವನ್ನು ರಚಿಸಲು ಯಾವ ಮಾನದಂಡಗಳನ್ನು ಅನುಪಾಲಿಸಲಾಗಿದೆ;</td><td>ಹೌದು.<br>ರಾಜ್ಯ ವೆಚ್ಚ ಸುಧಾರಣಾ ಆಯೋಗವು ಜುಲೈ–2011 ಲ್ಲಿ ನೀಡಿರುವ ಶಿಫಾರಸ್ಸುಗಳ ಸಾರಾಂಶದಲ್ಲಿ, ರಾಜ್ಯ ರಸ್ತೆ ನಿಯಂತ್ರಣ ಪ್ರಾಧಿಕಾರವನ್ನು ರಚಿಸಲು ಶಿಫಾರಸ್ಸು ಮಾಡಲಾಗಿರುತ್ತದೆ.<br>ಕರ್ನಾಟಕ ಸರ್ಕಾರದ ಸಾರ್ವಜನಿಕ ವಲಯದ ಉದ್ಯಮಗಳ 31ನೇ ಮಾರ್ಚ್–2019 ಕ್ಕೆ ಅಂತ್ಯಗೊಂಡ ವರ್ಷಕ್ಕೆ ಭಾರತದ ನಿಯಂತ್ರಕರು ಮತ್ತು ಲೆಕ್ಕ ಪರಿಶೋಧಕರ ಲೆಕ್ಕ ಪರಿಶೋಧನಾ ವರದಿಯಲ್ಲಿ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ವತಿಯಿಂದ ಸಾರ್ವಜನಿಕ ಖಾಸಗಿ ಸಹಭಾಗಿತ್ವದ (PPP) ಮೂಲಕ ಕೈಗೊಳ್ಳಲಾದ ರಾಜ್ಯ ಹೆದ್ದಾರಿಗಳ ಅಭಿವೃದ್ಧಿ ಕುರಿತು ಕಾರ್ಯಕ್ಷಮತೆ ಲೆಕ್ಕಪರಿಶೋಧನಾ ವರದಿಯನ್ನು ಆಧರಿಸಿ ದಿನಾಂಕ:18–08–2021 ರಂದು ನಡೆದ ಕರ್ನಾಟಕ ವಿಧಾನಮಂಡಲದ ಸಾರ್ವಜನಿಕ ಉದ್ಯಮಗಳ ಸಮಿತಿಯ (Committee on Public Undertakings) ಸಭೆಯಲ್ಲಿ ಕರ್ನಾಟಕ ರಸ್ತೆ ನಿಯಂತ್ರಣ ಪ್ರಾಧಿಕಾರವನ್ನು ರಚಿಸಲು ಅಭಿಪ್ರಾಯ ವ್ಯಕ್ತಪಡಿಸಲಾಗಿರುತ್ತದೆ.<br>ಅದರಂತೆ, ಕರ್ನಾಟಕ ರಾಜ್ಯ ರಸ್ತೆ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರವನ್ನು ರಸ್ತೆಗಳ ಅಭಿವೃದ್ಧಿ ನೀತಿ ನಿರೂಪಣೆ ಬಗ್ಗೆ ಸಲಹಾ ಸಂಸ್ಥೆಯನ್ನಾಗಿ ಸೃಜಿಸಲಾಗಿರುತ್ತದೆ.</td></tr>
</table>

| | | |
|---|---|---|
| ಇ) | ಈ ಇಲಾಖೆಯಲ್ಲಿ ಉನ್ನತ ಸ್ಥಾನದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಎಷ್ಟು ಅಧಿಕಾರಿಗಳಿದ್ದರೂ ಈ ಪ್ರಾಧಿಕಾರಕ್ಕೆ ಒಬ್ಬ ನಿವೃತ್ತ ಅಧಿಕಾರಿಯನ್ನು ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಸಿಇಒ) ನೇಮಿಸಲು ಕಾರಣಗಳೇನು; | ಕರ್ನಾಟಕ ರಾಜ್ಯ ರಸ್ತೆ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರವನ್ನು ಸೃಜಿಸಲಾಗಿರುವ ಸರ್ಕಾರದ ಆದೇಶ ಸಂಖ್ಯೆ:ಲೋಇ:28:ಇಎಪಿ:2023, ದಿನಾಂಕ:31.07.2023 ರಂತೆ ಲೋಕೋಪಯೋಗಿ ಇಲಾಖೆಯ ನಿವೃತ್ತ ಪ್ರಧಾನ ಇಂಜಿನಿಯರ್ ರವರು ಸದರಿ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿರುತ್ತಾರೆ.<br>ಅದರಂತೆ, ಅನುಭವವುಳ್ಳ ಲೋಕೋಪಯೋಗಿ ಇಲಾಖೆಯ ನಿವೃತ್ತ ಸರ್ಕಾರದ ಕಾರ್ಯದರ್ಶಿಯವರನ್ನು (ಪ್ರಧಾನ ಇಂಜಿನಿಯರ್) ಸದರಿ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ನೇಮಿಸಲಾಗಿರುತ್ತದೆ. |
| ಈ) | ಈ ಪ್ರಾಧಿಕಾರ ರಚಿಸಿ ಕಛೇರಿ ಚುಟುವಟಿಕೆಗಳನ್ನು ಕೈಗೊಳ್ಳಲು ಕಛೇರಿಯನ್ನು ಎಲ್ಲಿ ಸ್ಥಾಪಿಸಲಾಗಿದೆ; ಮತ್ತು ಈ ಕಛೇರಿಯ ನವೀಕರಣಕ್ಕಾಗಿ ಖರ್ಚು ಮಾಡಲಾದ ಮೊತ್ತವೆಷ್ಟು; ದೊಡ್ಡ ಮೊತ್ತದ ಹಣವನ್ನು ಖರ್ಚು ಮಾಡಿ ನವೀಕರಿಸುವ ಅವಶ್ಯಕತೆಯಿದೆಯೇ; | ಲೋಕೋಪಯೋಗಿ ಇಲಾಖೆ ಪೂರಕ ಕಟ್ಟಡ, ಕೆ.ಆರ್ ವೃತ್ತ, ಬೆಂಗಳೂರು ಇಲ್ಲಿನ ಮೊದಲನೇ ಮಹಡಿಯಲ್ಲಿ ಸದರಿ ಪ್ರಾಧಿಕಾರದ ಕಛೇರಿಯನ್ನು ಸ್ಥಾಪಿಸಲಾಗಿರುತ್ತದೆ.<br>ಸದರಿ ಲೋಕೋಪಯೋಗಿ ಇಲಾಖೆ ಪೂರಕ ಕಟ್ಟಡದ ಮೊದಲ ಮಹಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ (ಕೆಶಿಪ್) ಕೇಂದ್ರ ಕಛೇರಿಯ ಒಂದು ಭಾಗದಲ್ಲಿ ಪ್ರಾಧಿಕಾರದ ಕಛೇರಿಗೆ ಸ್ಥಳಾವಕಾಶ ನೀಡಲಾಗಿದ್ದು, ಸದರಿ ಪ್ರಾಧಿಕಾರ ಕಛೇರಿ ನವೀಕರಣಕ್ಕೆ ಯಾವುದೇ ಮೊತ್ತ ಖರ್ಚು ಮಾಡಿರುವುದಿಲ್ಲ. |
| ಉ) | ಈ ಪ್ರಾಧಿಕಾರಕ್ಕೆ ಅಧ್ಯಕ್ಷರನ್ನಾಗಿ ಯಾರನ್ನು ನೇಮಿಸಲಾಗಿದೆ ಮತ್ತು ಈ ಪ್ರಾಧಿಕಾರದ ಸದಸ್ಯರು ಯಾರು? | ಕರ್ನಾಟಕ ರಾಜ್ಯ ರಸ್ತೆ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ಹಾಗೂ ಸದಸ್ಯರುಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |

ಸಂಖ್ಯೆ. ಲೋಇ E- 321 ಇಎಪಿ 2024

**(ಸತೀಶ ಜಾರಕಿಹೊಳಿ)**
ಲೋಕೋಪಯೋಗಿ ಸಚಿವರು

# ಅನುಬಂಧ

| ಕ್ರ. ಸಂ. | ಪದನಾಮ | ಸದಸ್ಯ/ಸದಸ್ಯ ಕಾರ್ಯದರ್ಶಿ |
|---|---|---|
| 1. | ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ. | ಅಧ್ಯಕ್ಷರು |
| 2. | ಮಾನ್ಯ ಲೋಕೋಪಯೋಗಿ ಸಚಿವರು | ಉಪಾಧ್ಯಕ್ಷರು |
| 3. | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (Chief Executive Officer) | ಲೋಕೋಪಯೋಗಿ ಇಲಾಖೆಯ ನಿವೃತ್ತ ಪ್ರಧಾನ ಇಂಜಿನಿಯರ್ (Engineer in Chief) |
| 4. | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ | ಪದನಿಮಿತ್ತ ಸದಸ್ಯರು |
| 5. | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ | ಪದನಿಮಿತ್ತ ಸದಸ್ಯರು |
| 6. | ಸರ್ಕಾರದ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ | ಪದನಿಮಿತ್ತ ಸದಸ್ಯರು |
| 7. | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ | ಸದಸ್ಯರು |
| 8. | ಮುಖ್ಯ ಯೋಜನಾಧಿಕಾರಿ, ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ. | ಸದಸ್ಯರು |
| 9. | ಮುಖ್ಯ ಯೋಜನಾಧಿಕಾರಿ, ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ. | ಸದಸ್ಯರು |
| 10. | ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ದಕ್ಷಿಣ), ಬೆಂಗಳೂರು. | ಸದಸ್ಯರು |
| 11. | ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ಉತ್ತರ), ಧಾರವಾಡ | ಸದಸ್ಯರು |
| 12. | ಮುಖ್ಯ ಇಂಜಿನಿಯರ್ ಸಂಪರ್ಕ ಮತ್ತು ಕಟ್ಟಡ (ಈಶಾನ್ಯ), ಕಲಬುರಗಿ. | ಸದಸ್ಯರು |
| 13. | ಮುಖ್ಯ ಇಂಜಿನಿಯರ್ ಸಂಪರ್ಕ ಮತ್ತು ಕಟ್ಟಡ (ಕೇಂದ್ರ), ಶಿವಮೊಗ್ಗ. | ಸದಸ್ಯರು |
| 14. | ಆಂತರಿಕ ಆರ್ಥಿಕ ಸಲಹೆಗಾರರು, ಲೋಕೋಪಯೋಗಿ ಇಲಾಖೆ | ಸದಸ್ಯರು |
| 15. | ರಸ್ತೆ ಹಾಗೂ ರಸ್ತೆ ಸುರಕ್ಷತಾ ನಿಪುಣರು | ನಾಮ ನಿರ್ದೇಶನ |
| 16. | ಸೇತುವೆ ನಿಪುಣರು | ನಾಮ ನಿರ್ದೇಶನ |
| 17. | ಮುಖ್ಯ / ಪ್ರಧಾನ ಇಂಜಿನಿಯರ್, ರಸ್ತೆಗಳ ಆಸ್ತಿ ಮತ್ತು ನಿರ್ವಹಣಾ ಕೇಂದ್ರ. | ಸದಸ್ಯ ಕಾರ್ಯದರ್ಶಿ |